
UASB LIBRARY
Newspaper Clippings
Pg .1 Thursday 09-09-2021 Jai Kisan



ಕಡಲಕಳೆ ಕೇಂದ್ರವಾಗಲಿದೆ ಲಕ್ಷದ್ವೀಪ!

ಉಪಯೋಗವೇನು?

1. ಯತೇಚ್ಛ ವಿಟಮಿನ್ ಹಾಗೂ ಖನಿಜಾಂಶ
2. ಥೈರಾಯ್ಡ್ ಸಮಸ್ಯೆಗಳ ನಿವಾರಣೆಗೆ ಸಹಕಾರಿ
3. ಆ್ಯಂಟಿಆಕ್ಸಿಡೆಂಟ್‌ಗಳ ಒಳಗೊಂಡಿರಲಿದೆ
4. ಕರುಳಿನ ಆರೋಗ್ಯ ಹೆಚ್ಚಿಸುವ ಫೈಬರ್ ಅಂಶ
5. ದೇಹದ ತೂಕ ಇಳಿಸಿಕೊಳ್ಳಲು ಸಹಕಾರಿ
6. ಹೃದಯ ಸಂಬಂಧಿತ ಕಾಯಿಲೆಗಳ ಗುಣಪಡಿಸಲು ಸಹಾಯ
7. ಮಧುಮೇಹ ಕಡಿಮೆ ಮಾಡಿಕೊಳ್ಳಲು ಬಳಕೆ



ಹೊಸದಿಲ್ಲಿ: ಲಕ್ಷದ್ವೀಪದ 9ಜನವಸತಿ ದ್ವೀಪ ಪ್ರದೇಶಗಳಲ್ಲಿ ಔಷಧಿಗಳ ತಯಾರಿ ಹಾಗೂ ಪೌಷ್ಟಿಕಾಂಶಯುಕ್ತ ಆಹಾರವಾಗಿ ಬಳಕೆಯಾಗುವ ಕಡಲಕಳೆ (ಸೀವೀಡ್) ಪಾಚಿ (ಆಲ್ಗೆ)ಯನ್ನು ಬೆಳೆಯಲು ಮತ್ತು ದ್ವೀಪವನ್ನು ಕಡಲಕಳೆ ಬೆಳೆಯ ಕೇಂದ್ರವನ್ನಾಗಿ ಪರಿವರ್ತಿಸಲು ಆಡಳಿತ ಉಪಕ್ರಮ ಒಂದನ್ನು ಆರಂಭಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಾಲಿನ್ಯ ರಹಿತ ಸರೋವರಗಳಲ್ಲಿ ಗುಣಮಟ್ಟದ ಕಡಲಕಳೆ ಬೆಳೆಯುವ ಉದ್ದೇಶದಿಂದ ಭಾರತೀಯ ಕೃಷಿ ಸಂಶೋಶಧನಾ ಮಂಡಳಿ (ಐಸಿಎಆರ್) ಯತಾಂತಿಕ್ರ ಬೆಂಬಲದೊಂದಿಗೆಕಡಲಕಳೆ ಉಪಕ್ರಮ ಆರಂಭಿಸಿರುವುದಾಗಿ ಕೇಂದ್ರ ಸಮುದ್ರ ಮೀನುಗಾರಿಕಾ ಸಂಶೋಧನಾ ಸಂಸ್ಥೆ (ಸಿಎಂಎಫ್‌ಆರ್‌ಐ) ತಿಳಿಸಿದೆ.

ಕಡಲಕಳೆ ಕೃಷಿಗೆ ಒತ್ತು ನೀಡುವ ಮುನ್ನ ದ್ವೀಪ ಪ್ರದೇಶಗಳಲ್ಲಿ ಇದನ್ನು ಬೆಳೆಯಲು ಸಾಧ್ಯವೇ? ಉತ್ತಮ ಗುಣಮಟ್ಟದ ಬೆಳೆ ನಿರೀಕ್ಷಿಸಬಹುದೇ ಎಂಬುದರ ಕುರಿತು ಸಿಎಂಎಫ್‌ಆರ್‌ಐ ಹಲವು ಸಂಶೋಧನೆಗಳನ್ನು ನಡೆಸಿದೆ. 2020-21ರ ಅವಧಿಯಲ್ಲಿ ಕಿಲ್ತಾನ್, ಚೆಟ್ಲಾ, ಕದ್ಮತ, ಅಗಟ್ಟಿ, ಕವರಟ್ಟಿ ದ್ವೀಪಗಳಲ್ಲಿ ಕಡಲಕಳೆಯ ಪ್ರಾಯೋಗಿಕ ಬೇಸಾಯ ಮಾಡಲಾಗಿದೆ.

ಇದರಿಂದ ದ್ವೀಪದಲ್ಲಿ ವಾರ್ಷಿಕ 30 ಸಾವಿರ ಟನ್ ಒಣಕಡಲಕಳೆ ಉತ್ಪಾದಿಸಬಹುದೆಂದು ತಿಳಿದುಬಂದಿದೆ ಇದರ ಮೌಲ್ಯ ಬರೋಬ್ಬರಿ 75 ಕೋಟಿ ರೂ.200ಹೆಕ್ಟೇರ್ ಕೃಷಿ ಭೂಮಿಯಲ್ಲಿ ಈ ಬೆಳೆ ಬೆಳೆಯಬಹುದಾಗಿದ್ದು, ಪ್ರತಿ ಹೆಕ್ಟೇರ್‌ನಿಂದ 150 ಟನ್‌ಉತ್ಪಾದನೆ ಸಾಧ್ಯವಿದೆ ಎಂದು ಸಂಶೋಧನಾ ಸಂಸ್ಥೆ ತಿಳಿಸಿದೆ.

ಈವರೆಗೆವಿಶಿಷ್ಟವಾದಟ್ಯೂನ್ ಮೀನು, ಅಸಂಖ್ಯಾತ ಸುಂದರ ಹವಳಗಳು, ರೀಫ್ ಮೀನು ಇನ್ನಿತರ ಜಲಚರಗಳಿಗೆ ಹೆಸರುವಾಸಿಯಾಗಿದ್ದ ಲಕ್ಷದ್ವೀಪ ಶೀಘ್ರದಲ್ಲೇ ಭಾರತದ ಕಡಲಕಳೆಯ ಕೃಷಿ ಎಂದು ಹೆಸರುವಾಸಿಯಾಗಲಿದೆ ಎಂದು ಸಿಎಂಎಫ್‌ಆರ್‌ಐ ವಿಜ್ಞಾನಿ ಡಾ. ಮೊಹಮ್ಮದ್ ಕೋಯಾ ಹೇಳಿದ್ದಾರೆ.



100 ಕುಟುಂಬಕ್ಕೆ ಅನುಕೂಲ

ಸ್ಥಳೀಯ ಕೆಂಪು ಪಾಚಿ, ಗ್ರಾಸೆಲೇರಿಯಾ ಎಡುಲಿಸ್ ಮತ್ತು ಅಕಾಂತೋಪೋರಾ ಸ್ಪಿಫೆರಾದಂತಹ ವಿವಿಧ ರೀತಿಯ ಕಡಲಕಳೆಯನ್ನು ಈಗಾಗಲೇ 2,500 ಬಿದಿರಿನ ತೆಪ್ಪಗಳ ಆಧಾರಿಸಿ ಕೃಷಿ ಮಾಡಲಾಗುತ್ತಿದೆ. ಇದರಿಂದ ದ್ವೀಪ ಪ್ರದೇಶದ 10 ಮಹಿಳಾ ಸ್ವಸಹಾಯ ಗುಂಪುಗಳಿಗೆ ಸೇರಿದ 100 ಕುಟುಂಬಗಳುಗೆ ಅನುಕೂಲವಾಗುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಅಧ್ಯಯನಗಳಿನ್ನೂ ನಡೆಯುತ್ತಿವೆ

ವರ್ಷಪೂರ್ತಿ ಕೃಷಿ ವಿಧಾನಗಳನ್ನು ಪ್ರಮಾಣೀಕರಿಸಲು ಇನ್ನೂ ಅಧ್ಯಯನಗಳನ್ನು ನಡೆಸಲಾಗುತ್ತಿದೆ. ಇದರ ಜತೆಗೆ ಸುಸ್ಥಿರ ಕಡಲಕಳೆ ಕೃಷಿ ಉದ್ಯಮಕ್ಕೆ ಉತ್ತಮ ವೈಜ್ಞಾನಿಕ ಆಧಾರ ಒದಗಿಸುವುದು, ಬೆಳೆಯ ಸಾಗಣೆ, ಸೂಕ್ತ ಕೃಷಿತಾಣಗಳ ಮ್ಯಾಪಿಂಗ್ ಜತೆಗೆ ಹಲವು ಕ್ರಮಗಳ ಬಗ್ಗೆಯೂ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಪರಿಸರ ಸ್ನೇಹಿ ಉಪಕ್ರಮ

ಕಡಲಕಳೆ ಬೆಳೆಗಳು ಇಂಗಾಲವನ್ನು ಅತ್ಯಧಿಕವಾಗಿ ಹೀರಿಕೊಳ್ಳುವ ಸಾಮರ್ಥ್ಯ ಹೊಂದಿದ್ದು, ದಿನಕ್ಕೆ ಸುಮಾರು 6,500 ಟನ್ ಇಂಗಾಲವನ್ನು ಹೀರಿಕೊಳ್ಳುತ್ತವೆ. ಇದರಿಂದ ಇಂಗಾಲ ಬಿಡುಗಡೆಯ ಸಮಸ್ಯೆಯೂ ಕಡಿಮೆಯಾಗುತ್ತದೆ ಹಾಗೂ ದ್ವೀಪವಾಸಿಗಳಿಗೆ ಉತ್ತಮ ಹವಾಮಾನ ವಾತವರಣ ನಿರ್ಮಾಣವಾಗುತ್ತದೆ ಎಂದು ಸಂಶೋಧನಾ ಸಂಸ್ಥೆ ತಿಳಿಸಿದೆ.



For more information visit
University Library Website
Web - uasbagrilibindia.org
E-mail- librarian@uasbangalore.edu.in

09-09-2021 Hd Pg 05

ಕಬ್ಬಿನ ಬೆಳೆಯ ಎಫ್‌ಆರ್‌ಪಿ ಏರಿಕೆ

ರೈತರಿಗೆ ಗೋಧಿ, ಸಾಸಿವೆ, ಚನ್ನಂಗಿ ಬೇಳೆ ಸೇರಿ ರಾಬಿ ಬೆಳೆಗಳ ಕನಿಷ್ಠ ಬೆಂಬಲ ಬೆಲೆ ಹೆಚ್ಚಳ

■ **ಪಿಟಿಐ** ಹೊಸದಿಲ್ಲಿ

ಕೇಂದ್ರ ಸರಕಾರವು ರಾಬಿ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಯನ್ನು ಬುಧವಾರ ಪ್ರಕಟಿಸಿದೆ. ಇವುಗಳು ಚಳಿಗಾಲದಲ್ಲಿ ಬೆಳೆಯುವ ಬೆಳೆಗಳಾಗಿದ್ದು, ಉತ್ಪಾದನೆ ಹೆಚ್ಚಿಸಲು ಹಾಗೂ ರೈತರ ಆದಾಯ ವೃದ್ಧಿಗೆ ಸಹಕಾರಿಯಾಗಲಿದೆ. ಸರಕಾರವು ಸಕ್ಕರೆ ಕಾರ್ಖಾನೆಗಳು ಕಬ್ಬುಬೆಳೆಗಾರರಿಗೆ ನೀಡಬೇಕಾದ ಕಬ್ಬಿನ ಕನಿಷ್ಠ ದರವನ್ನು (ಎಫ್‌ಆರ್‌ಪಿ) ಪ್ರತಿ ಕ್ವಿಂಟಾಲ್‌ಗೆ 290 ರೂ.ಗೆ ಏರಿಸಿದೆ. ಈ ಹಿಂದಿನ ದರಕ್ಕೆ ಹೋಲಿಸಿದರೆ ಕ್ವಿಂಟಾಲ್‌ಗೆ 5 ರೂ. ಏರಿಕೆಯಾಗಿದೆ.

ಸರಕಾರ ಪ್ರತಿ ಕ್ವಿಂಟಾಲ್‌ಗೆ 290 ರೂ.ಗೆ ಎಫ್ ಆರ್‌ಪಿಯನ್ನು ಪರಿಷ್ಕರಿಸಿದ್ದರೂ, ಬೆಳೆಗಾರರ ಬೇಡಿಕೆಗೆ ಹೋಲಿಸಿದರೆ ಈಗಲೂ ಕಡಿಮೆಯಾಗಿದೆ. ಉತ್ಪಾದನೆಯ ವೆಚ್ಚದಲ್ಲಿ ಗಣನೀಯ ಏರಿಕೆಯಾಗಿರುವುದರಿಂದ ಕ್ವಿಂಟಾಲ್‌ಗೆ 320 ರೂ.



ಗಿಂತ ಹೆಚ್ಚಿನ ಮಟ್ಟದಲ್ಲಿ ಎಫ್‌ಆರ್‌ಪಿ ಪರಿಷ್ಕರಿಸಬೇಕು ಎಂದು ಬೆಳೆಗಾರರು ಒತ್ತಾಯಿಸಿದ್ದಾರೆ.

ಗೋಧಿಗೆ ಪ್ರತಿ ಕ್ವಿಂಟಾಲ್‌ಗೆ 40 ರೂ. ಏರಿಸಲಾಗಿದ್ದು 2,015 ರೂ.ಗಳಾಗಿದೆ. ಸಾಸಿವೆಗೆ 400 ರೂ. ಏರಿಸಲಾಗಿದ್ದು, ಕ್ವಿಂಟಾಲ್‌ಗೆ 5,050 ರೂ. ನಿಗದಿಯಾಗಿದೆ.

ಮಸೂರ್ ದಾಲ್‌ಗೆ (ಚನ್ನಂಗಿ ಬೇಳೆ) ಶೇ.8.6ರಷ್ಟು ಹೆಚ್ಚಿಸಲಾಗಿದೆ. ಹೀಗಾಗಿ ಚನ್ನಂಗಿ ಬೇಳೆಗೆ ಎಂಎಸ್‌ಪಿ ಕ್ವಿಂಟಾಲ್‌ಗೆ 5,500 ರೂ.ಗೆ ಏರಿಕೆಯಾಗಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸಚಿವ ಸಂಪುಟ ಸಭೆಯಲ್ಲಿ ಅನುಮೋದಿಸಲಾಯಿತು.

ಮುಂಗಾರು ಬೆಳೆಯ ಕೊಯ್ಲಿನ ನಂತರ ರಾಬಿ ಬೆಳೆಗಳ ಕೃಷಿ ನಡೆಯುತ್ತದೆ. ಎಂಎಸ್‌ಪಿಯು ಸರಕಾರ ರೈತರಿಂದ ಖರೀದಿಸುವ ಬೆಳೆಗಳ ದರವಾಗಿದೆ. 23 ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಯ ಸೌಲಭ್ಯವಿದೆ. ರಾಬಿ ಬೆಳೆಯ ಬಿತ್ತನೆ ಆಕ್ಟೋಬರ್‌ನಲ್ಲಿ ಆರಂಭವಾಗುತ್ತದೆ. ಗೋಧಿ ಹಾಗೂ ಸಾಸಿವೆ ಪ್ರಮುಖ ರಾಬಿ ಬೆಳೆಗಳಾಗಿದೆ.

ಗೋಧಿಗೆ ಪ್ರತಿ ಕ್ವಿಂಟಾಲ್‌ಗೆ ಅಂದಾಜು 1,008 ರೂ. ವೆಚ್ಚವಾಗುತ್ತದೆ ಎಂದು ಸರಕಾರ ತಿಳಿಸಿದೆ. ಬಾರ್ಲಿಯ ಎಂಎಸ್‌ಪಿಯಲ್ಲಿ 35 ರೂ. ಏರಿಸಲಾಗಿದ್ದು, 1,635 ರೂ.ಗೆ ಏರಿಕೆಯಾಗಿದೆ. ಸೂರ್ಯಕಾಂತಿಗೆ ಎಂಎಸ್‌ಪಿಯಲ್ಲಿ 114 ರೂ. ಏರಿಕೆಯಾಗಿದ್ದು, ಕ್ವಿಂಟಾಲ್‌ಗೆ 5,441 ರೂ.ಗೆ ನಿಗದಿಯಾಗಿದೆ.

09-09-2021 Vk Pg 11

ಕಬ್ಬಿಗೆ 290 ರೂ. ಹೆಚ್ಚಳ | ಹಿಂಗಾರು ಬೆಳೆಗಳ ಬೆಂಬಲ ಬೆಲೆ ಏರಿಕೆ

ರೈತರಿಗೆ ಬಂಪರ್

ಹೊಸದಿಲ್ಲಿ: ವೈವಿಧ್ಯಮಯ ಬೆಳೆಗಳಿಗೆ ಉತ್ತೇಜನ ನೀಡುವ ಮೂಲಕ ರೈತರ ಆದಾಯ ಹೆಚ್ಚಿಸುವ ಉದ್ದೇಶದಿಂದಾಗಿ ಬುಧವಾರ ಕೇಂದ್ರ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿ (ಸಿಸಿಇಎ) ಸಭೆಯಲ್ಲಿ, 2022-23ರ ಸಾಲಿಗೆ ಎಲ್ಲ ಹಿಂಗಾರು ಬೆಳೆಗಳಿಗೆ ಬೆಂಬಲ ಬೆಲೆ ಹೆಚ್ಚಿಸಿ ಅನುಮೋದನೆ ನೀಡಿದೆ. ಇದೇ ವೇಳೆ ಕಬ್ಬು ಬೆಳೆಗಾರರ ಹಿತ ಕಾಪಾಡಲು ಕ್ವಿಂಟಾಲ್‌ಗೆ 290 ರೂ.ನಂತೆ ಇದುವರೆಗಿನ ಹೆಚ್ಚು ನ್ಯಾಯಸಮ್ಮತ ಮತ್ತು ಪ್ರೋತ್ಸಾಹದಾಯಕ ದರ ನಿಗದಿಪಡಿಸಿದೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸಂಪುಟ ಸಭೆಯು 2021-22ನೇ ವರ್ಷಕ್ಕೆ ಪ್ರತಿ ಕ್ವಿಂಟಾಲ್ ಗೋಧಿಗೆ ಬೆಂಬಲ ಬೆಲೆಯನ್ನು 40 ರೂ. ಏರಿಕೆ ಮಾಡುವ ಮೂಲಕ 2015 ರೂ. ಗಳಿಗೆ ಹೆಚ್ಚಳ ಮಾಡಲಾಗಿದೆ. ಪ್ರಸ್ತುತ ಸರ್ಕಾರ 23 ಹಿಂಗಾರು ಮತ್ತು ಮುಂಗಾರು ಬೆಳೆಗಳಿಗೆ ಬೆಂಬಲ ಬೆಲೆ ನಿಗದಿ ಪಡಿಸಿದೆ.

ಬೆಂಬಲ ಬೆಲೆ ಏರಿಕೆಯಿಂದ ಅನ್ನದಾತರಿಗೆ ಗರಿಷ್ಠ ಪ್ರೋತ್ಸಾಹ ಧನವನ್ನು ಖಚಿತಪಡಿಸುವುದರ ಜತೆಗೆ ವೈವಿಧ್ಯಮಯ ಬೆಳೆಗಳನ್ನು ಬೆಳೆಯಲು ಉತ್ತೇಜನ ನೀಡುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಟ್ವೀಟ್ ಮಾಡಿದ್ದಾರೆ.



ಎಲ್ಲ ಹಿಂಗಾರು ಬೆಳೆಗಳ ಬೆಂಬಲ ಬೆಲೆ ಏರಿಕೆಗೆ ಸರ್ಕಾರ ಅನುಮೋದನೆ ನೀಡುವುದರೊಂದಿಗೆ ರೈತ ಸಹೋದರ, ಸಹೋದರಿಯರ ಹಿತಾಸಕ್ತಿಯಲ್ಲಿ ಮತ್ತೊಂದು ದೊಡ್ಡ ನಿರ್ಧಾರ ಕೈಗೊಳ್ಳಲಾಗಿದೆ.

■ ನರೇಂದ್ರ ಮೋದಿ, ಪ್ರಧಾನಿ



- ಕೇಂದ್ರದ ನಿರ್ಧಾರದಿಂದ 5 ಕೋಟಿಗೂ ಅಧಿಕ ಕಬ್ಬು ಬೆಳೆಗಾರರು ಮತ್ತು ಕಬ್ಬು ಕಾರ್ಖಾನೆಗಳಲ್ಲಿನ 5 ಲಕ್ಷಕ್ಕೂ ಅಧಿಕ ನೌಕರರಿಗೆ ಲಾಭ
- ನ್ಯಾಯಯುತ ಮತ್ತು ಲಾಭದಾಯಕ ಬೆಲೆಯನ್ನು 2020-21ರ ಮಾರುಕಟ್ಟೆ ವರ್ಷಕ್ಕೆ ಪ್ರತಿ ಕ್ವಿಂಟಾಲ್ ಕಬ್ಬಿಗೆ 10 ರೂ. ಗಳಿಂದ 290 ರೂ.ಗೆ ಹೆಚ್ಚಿಸಲಾಗಿದೆ

ಬೆಳೆ	ಬೆಂಬಲ ಬೆಲೆ (ರೂ.ಗಳಲ್ಲಿ)	ಹೆಚ್ಚಳ (ರೂ.ಗಳಲ್ಲಿ)
ಗೋಧಿ	2015	40
ಬಾರ್ಲಿ	1635	35
ಬೇಳೆ	5230	130
ಮಸೂರ್ ಬೇಳೆ	5500	400
ಸಾಸಿವೆ	5050	400
ಸೂರ್ಯಕಾಂತಿ	5441	114

09-09-2021 Hd Pg 01

ನಮ್ಮ ನೀಲಕುರುಂಜಿ

■ ಚೇತನಾ ಬಡೇಕರ್, ಶೈಕ್ಷಣಿಕ ನಿರ್ದೇಶಕಿ, ಚಿರ ಎಜುಕೇಶನಲ್ ಟ್ರಸ್ಟ್

ಪಶ್ಚಿಮ ಘಟ್ಟಗಳ ಕೊಡಗು ಪರ್ವತ ಶ್ರೇಣಿಯ ಹಸಿರು ಹುಲ್ಲುಗಾವಲುಗಳು ನೀಲಿವರ್ಣಮಯವಾಗುತ್ತಾ ನೀಲಕುರುಂಜಿ ಹೂ ಅರಳಿರುವ ಬಲು ಅಪರೂಪದ ಸನ್ನಿವೇಶವೊಂದನ್ನು ಸಾರಿ ಹೇಳುತ್ತಿವೆ. ಕೊಡಗಿನ ವನ ಪರ್ವತ ಶ್ರೇಣಿಗಳು ಈ ಐತಿಹಾಸಿಕ ಕ್ಷಣಗಳಿಗಾಗಿ ಕಳೆದ ಏಳು ವರ್ಷಗಳಿಂದ ಕಾದಿರುತ್ತದೆ. ಸುಮಾರು 1600ಕಿ.ಮೀ. ಉದ್ದಕ್ಕೂ ಚಾಚಿಕೊಂಡಿರುವ ಈ ಪರ್ವತ ಶ್ರೇಣಿಗಳಲ್ಲಿ 5000ಕ್ಕೂ ಹೆಚ್ಚಿನ ಸಸ್ಯ ಪ್ರಭೇದಗಳು, 139 ಸಸ್ತನಿಗಳು, 508 ಪಕ್ಷಿ ಪ್ರಭೇದಗಳು, 179ಕ್ಕೂ ಹೆಚ್ಚು ಉಭಯವಾಸಿಗಳಿಂದ ತುಂಬಿರುವ ಜೀವ ವೈವಿಧ್ಯತೆಯ ಮಹಾಕೇಂದ್ರಗಳಾಗಿವೆ. ಇದನ್ನು ಆಂಗ್ಲ ಭಾಷೆಯಲ್ಲಿ ಬಯೊಡೈವರ್ಸಿಟಿ ಹಾಟ್‌ಸ್ಪಾಟ್ ಎನ್ನಲಾಗುತ್ತದೆ. ಪ್ರಪಂಚದ 35 ಜೀವ ವೈವಿಧ್ಯತೆ ಮಹಾಕೇಂದ್ರಗಳಲ್ಲಿ ಪಶ್ಚಿಮ ಘಟ್ಟಗಳು ಸೇರಿದ್ದು ಇದೊಂದು ಜೈವ ಸಂಶೋಧನಾ ಶಾಲೆಯಾಗಿದೆ. ಮೂಲ ಆವಾಸಸ್ಥಾನದ ಸುತ್ತಮುತ್ತ ಮಾತ್ರ ಕಂಡುಬರುವ ಈಗ ಅರಳಿನಿಂತಿರುವ ಸ್ಟೊಬಿಲಾಂತಸ್ ಸೆಸ್ಸೈಲಿಸ್ ಪ್ರಭೇದಗಳು ಕೊಡಗು ಜಿಲ್ಲೆಯ ಮಡಿಕೇರಿಯಿಂದ 25–30 ಕಿ. ಮೀ. ದೂರದ ಮಾಂದಲ್ ಪಟ್ಟಿ ಎಂಬ ಪ್ರವಾಸಿ ತಾಣದಲ್ಲಿದ್ದೆ.



ಸ್ಟೊಬಿಲಾಂತಸ್ ಸಸ್ಯಗಳು: ನೀಲ ಕುರುಂಜಿ ಎಂದು ಹೆಸರುವಾಸಿಯಾಗಿರುವ ಸ್ಟೊಬಿಲಾಂತಸ್ ಪ್ರಭೇದಗಳು ಸಾಮಾನ್ಯವಾಗಿ 12 ವರ್ಷಗಳಿಗೊಮ್ಮೆ ಹೂ ಬಿಡುತ್ತದೆ. ಆದರೆ ಈಗ ಕೊಡಗಿನಲ್ಲಿ ಹೂ ಬಿಟ್ಟಿರುವುದು ಸ್ಟೊಬಿಲಾಂತಸ್ ಸೆಸ್ಸೈಲಿಸ್ ಎಂಬ ಪ್ರಭೇದ ಎಂದು ಸ್ಟೊಬಿಲಾಂತಸ್ ತಜ್ಞರಾದ ಡಾ. ಐಐ ಜೋಮಿ ಅಗಸ್ಟಿನ್ ಅವರು ಖಾತ್ರಿಪಡಿಸಿದ್ದಾರೆ. ಅಕಾಂತೇಸಿ ಎಂಬ ಸಸ್ಯ ಕುಟುಂಬಕ್ಕೆ ಸೇರಿದ ಸ್ಟೊಬಿಲಾಂತಸ್ ಜೀನ್ಸ್‌ನಲ್ಲಿ 70 ಪ್ರಭೇದಗಳನ್ನು ವಿಜ್ಞಾನಿಗಳು ಗುರುತಿಸಿದ್ದಾರೆ. ಹೆಚ್ಚಿನ ಸ್ಟೊಬಿಲಾಂತಸ್ ಸಸ್ಯ ಪ್ರಭೇದಗಳು ' ಸ್ಥಳೀಯ ಪ್ರಭೇದಗಳಾಗಿವೆ. ಆದುದರಿಂದಲೇ ಸಸ್ಯ ಸಂಶೋಧಕರು ಇದನ್ನು ಎಂಡಮಿಕ್ ಸ್ಪೀಶೀಸ್ ಎಂದು ಕರೆಯುತ್ತಾರೆ.

ನಮ್ಮಲ್ಲಿ ಮಾತ್ರ ಇರುವ ನಮ್ಮ ನೀಲ ಕುರುಂಜಿ: ಸ್ಟೊಬಿಲಾಂತಸ್ ಸೆಸ್ಸೈಲಿಸ್ ನಲ್ಲಿ ಮೂರು ಪ್ರಕಾರ ಅಥವಾ ತಳಿಗಳಿವೆ: ಮೊದಲನೆಯದು – ಸೆಸ್ಸೈಲಿಸ್, ಎರಡನೆಯದಾಗಿ – ರಿಟ್ಚಿಯೈ, ಮೂರನೆಯದು – ಸೆಸ್ಸಿಲೋಯಿಡ್ಸ್. ಇದರಲ್ಲಿ ಮೊದಲನೆಯ ಪ್ರಕಾರ ಸೆಸ್ಸೈಲಿಸ್‌ಗಳು ಕೇರಳದಲ್ಲಿ ಕಂಡುಬರುತ್ತದೆ, ರಿಟ್ಚಿಯೈಗಳು ಮಹಾರಾಷ್ಟ್ರದ ಪರ್ವತ ಶ್ರೇಣಿಯನ್ನು ಅಲಂಕರಿಸಿದೆ. ಮೂರನೆಯದಾದ ಸೆಸ್ಸಿಲೊಯಿಡ್ಸ್ ಮಾತ್ರ ಇವುಗಳಲ್ಲಿ ಅತೀ ಸುಂದರವಾದ, ಹಾಗೆಯೇ ಅತಿ ವಿರಳವಾದ ನಮ್ಮ ಕರುನಾಡಿನ ಸಂಪತ್ತಾಗಿದೆ. ಸ್ಥಳೀಯರಿಗೆ ಪರಿಚಯವಿರುವ ಸಾಮಾನ್ಯವಾಗಿ ಕಂಡುಬರುವ ಪ್ರಭೇದ ಸ್ಟೊಬಿಲಾಂತಸ್ ಕುಂತಿಯಾನ. ನೀಲಕುರುಂಜಿ ಗಿಡಗಳು ದಕ್ಷಿಣಭಾಗದ ಪಶ್ಚಿಮ ಘಟ್ಟಗಳಲ್ಲಿ ಅಂದರೆ, ಕೊಡಗು, ನೀಲಗಿರಿ ಬೆಟ್ಟಗಳಲ್ಲಿ, ಪಳನಿ ಬೆಟ್ಟಗಳಲ್ಲಿ ಮತ್ತು ಅಣ್ಣಾಮಲೈ ಪರ್ವತಗಳಲ್ಲಿ ಕಂಡುಬರುತ್ತದೆ.

ಡಾ ಜೋಮಿ ಅಗಸ್ಟಿನ್ ಎಂಬ ಸ್ಟೊಬಿಲಾಂತಸ್ ಸಂತ: ಮೂಲತಃ ಕೇರಳ ರಾಜ್ಯದ ಕೋಟ್ಟಾಯಮ್ ಜಿಲ್ಲೆಯ ಪಾಲ ಎಂಬ ಪ್ರದೇಶದವರಾದ ಡಾ. ಜೋಮಿ ಅಗಸ್ಟಿನ್ ಅವರು 1991ರಲ್ಲಿ ಸಸ್ಯ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದು ಸಂಶೋಧನಾ ವೃತ್ತಿ ಜೀವನವನ್ನು ಆರಂಭಿಸಿದರು. ತನ್ನ ಜೀವನದ 25 ವರ್ಷಗಳನ್ನು ಸ್ಟೊಬಿಲಾಂತಸ್ ಸಂಶೋಧನೆಯಲ್ಲಿ ತೊಡಗಿಸಿಕೊಂಡ ತಪಸ್ವಿ ಇವರು. ಸ್ಟೊಬಿಲಾಂತಸ್ ಜೋಮಿಯೈ ಎಂಬ ನೀಲಕುರುಂಜಿಯ ಪ್ರಭೇದ ಇವರ ಹೆಸರಿನಿಂದಲೆ ಕರೆಯಲಾಗುತ್ತದೆ. ಸ್ಥಳೀಯರಿಗೆ, ನೀಲಕುರುಂಜಿಯನ್ನು ನೋಡುವ ಆಸಕ್ತರಿಗೆ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳ ಒಳಗೆ ಆರಣ್ಯ ಇಲಾಖೆಯ ನಿರ್ದೇಶನ ಪಾಲಿಸಿಕೊಂಡು ಭೇಟಿ ನೀಡಬಹುದು.

ರೈತರಿಗೆ ಒಂದಿಷ್ಟು ನೆರವು

ರೈತರ ಆದಾಯವನ್ನು 2022ರ ಹೊತ್ತಿಗೆ ದ್ವಿಗುಣಗೊಳಿಸುವ ಗುರಿ ಹೊಂದಿರುವ ಕೇಂದ್ರ ಸರ್ಕಾರ ಈ ನಿಟ್ಟಿನಲ್ಲಿ ಹಲವು ಕ್ರಮಗಳನ್ನು ಕೈಗೊಳ್ಳುತ್ತಿದೆ. ಮಧ್ಯವರ್ತಿಗಳ ಹಾವಳಿ ಇಲ್ಲವಾಗಿಸುವುದು, ಕೃಷಿಉತ್ಪನ್ನಗಳಿಗೆ ನ್ಯಾಯಯುತ ಬೆಲೆ ಸಿಗುವಂತೆ ಮಾಡುವುದು ಮತ್ತು ಕೃಷಿಕ್ಷೇತ್ರದಲ್ಲಿ ಮೂಲಸೌಕರ್ಯ ವಿಸ್ತರಿಸುವುದು ಪ್ರಮುಖ ಉದ್ದೇಶವಾಗಿದೆ. ಸದ್ಯ ದೇಶದಲ್ಲಿ ಕೆಲ ರೈತರು ಹೊಸ ಕೃಷಿ ಕಾನೂನುಗಳ ವಿರುದ್ಧ ಪ್ರತಿಭಟನೆ ಮುಂದುವರಿಸಿದ್ದಾರೆ. ಮತ್ತು ಹೊಸ ಕಾನೂನಿನ ಅನ್ವಯ ಸರ್ಕಾರ ಬೆಂಬಲ ಬೆಲೆ ವ್ಯವಸ್ಥೆಯನ್ನೇ ಕೊನೆಗೊಳಿಸಲು ಹೊರಟಿದೆ ಎಂಬುದು ಅವರ ಆರೋಪ. ಇದಕ್ಕೆ ಉತ್ತರ ನೀಡಲೆಂಬಂತೆ ಹಿಂಗಾರು ಬೆಳೆಗಳಿಗೆ ಕೇಂದ್ರ ಬೆಂಬಲ ಬೆಲೆ ಘೋಷಿಸಿದೆ. ರೈತರ ಬೇಡಿಕೆಯಷ್ಟು ಬೆಂಬಲ ಬೆಲೆ ಏರಿಕೆ ಆಗಿಲ್ಲ ಎಂಬ ಆಕ್ಷೇಪದ ದನಿಗಳು ಕೇಳಿಬರುತ್ತಿದ್ದರೂ, ಬೆಳಿಗಾರರಿಗೆ ಈ ಬೆಂಬಲ ಬೆಲೆ ಒಂದಿಷ್ಟು ಮಟ್ಟಿಗಾದರೂ ನೆರವಿಗೆ ಬರಲಿದೆ ಎಂಬುದು ತಜ್ಞರ ಅಭಿಪ್ರಾಯ.



ಪ್ರೋತ್ಸಾಹಕ ನೀತಿಗಳು ಮುಂದುವರಿಯಬೇಕು

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅಧ್ಯಕ್ಷತೆಯ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿ ಮಾನ್ಯ ಮಾಡಿದ ಎಲ್ಲ ಹಿಂಗಾರು ಬೆಳೆಗಳಿಗೆ ಎಂಎಸ್‌ಪಿ ಹೆಚ್ಚಿಸಲು ಬುಧವಾರ ನಡೆದ ಸಂಪುಟ ಸಭೆ ತೀರ್ಮಾನ ತೆಗೆದುಕೊಂಡಿದೆ. ಖಾರಿಫ್ (ಮುಂಗಾರು) ಬೆಳೆ ಕಟಾವು ಮಾಡಿದ ಕೂಡಲೇ ಹಿಂಗಾರು ಬೆಳೆಗಳ ಬಿತ್ತನೆ ಕಾರ್ಯ ಆಕ್ಟೋಬರ್‌ನಲ್ಲಿ ಶುರುವಾಗಲಿದೆ. ಗೋಧಿಯ ಕನಿಷ್ಠ ಬೆಂಬಲ ಬೆಲೆ ಕ್ವಿಂಟಾಲ್‌ಗೆ 40 ರೂಪಾಯಿ, ಸಾಸಿವೆಗೆ ಕ್ವಿಂಟಾಲ್‌ಗೆ 400 ರೂಪಾಯಿ ಹೆಚ್ಚಳವಾಗಲಿದೆ. ಕೇಂದ್ರ ಸರ್ಕಾರವು 2018-19ರ ಮುಂಗಡಪತ್ರದಲ್ಲಿ ಘೋಷಿಸಿದಂತೆ ಅಖಿಲ ಭಾರತ ಮಟ್ಟದ ಸರಾಸರಿ ಉತ್ಪಾದನಾ ವೆಚ್ಚದ ಕನಿಷ್ಠ 1.5 ಪಟ್ಟು ಹೆಚ್ಚು ಎಂಎಸ್‌ಪಿ ಸಿಗುವಂತೆ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳುತ್ತಿರುವುದು ಗಮನಾರ್ಹ. ಉತ್ಪಾದನೆ ಹೆಚ್ಚಾಗಿ ಮಾರುಕಟ್ಟೆಯಲ್ಲಿ ದಿಢೀರ್ ಆಗಿ ಬೆಲೆ ಕುಸಿತವಾದರೆ ಈ ಬೆಂಬಲ ಬೆಲೆ ವ್ಯವಸ್ಥೆ ರೈತರ ಕೈಹಿಡಿಯುವುದರಲ್ಲಿ ಅನುಮಾನವಿಲ್ಲ. 'ಅನ್ನದಾತರಿಗೆ ಹೆಚ್ಚಿನ ಆದಾಯ ಖಾತರಿಗೊಳಿಸುವ ಕ್ರಮವನ್ನು ಸರ್ಕಾರ ತೆಗೆದುಕೊಂಡಿದೆ. ಇದು ವೈವಿಧ್ಯ ಬೆಳೆ ಬೆಳೆಯುವುದಕ್ಕೆ ಉತ್ತೇಜನ ಒದಗಿಸುವಂಥ ಕ್ರಮವಾಗಿದೆ' ಎಂದು ಪ್ರಧಾನಿ ಪ್ರತಿಕ್ರಿಯಿಸುವ ಮೂಲಕ, ಈ ನಿರ್ಧಾರದ ಮಹತ್ವ ವಿವರಿಸುವ ಪ್ರಯತ್ನ ಮಾಡಿದ್ದಾರೆ.

ರೈತರು ಬೆಳೆಗಳಿಗೆ ಮಾಡಿದ ಖರ್ಚು ಕೂಡ ಕೈಗೆ ಸಿಗದೇ ಇದ್ದಾಗ ಹತಾಶರಾಗುತ್ತಾರೆ. ಹಾಗಾಗಿ, ಬೆಂಬಲ ಬೆಲೆಯ ವ್ಯವಸ್ಥೆ ಪರಿಣಾಮಕಾರಿಯಾಗಿ ಜಾರಿಯಾಗುವ ಮೂಲಕ, ರೈತರಿಗೆ ಸ್ಥೈರ್ಯ ತುಂಬಬೇಕು. ರೈತರ ಪರಂಪರಾಗತ ಕೃಷಿ ಪದ್ಧತಿ ರಕ್ಷಣೆ ಜತೆಗೆ ಸುಸ್ಥಿರ ಅಭಿವೃದ್ಧಿ, ಜೀವನಮಟ್ಟ ಸುಧಾರಣೆ, ಉತ್ಪಾದನೆ ಹಾಗೂ ಉತ್ಪಾದಕತೆ ಹೆಚ್ಚಳದ ಕಡೆಯೂ ಸರ್ಕಾರ ಮನಸ್ಸು ಮಾಡಬೇಕು. ಮುಖ್ಯವಾಗಿ, ಪ್ರತಿಭಟನೆ ನಡೆಸುತ್ತಿರುವ ರೈತರ ಕಳವಳ, ಆತಂಕ ಅರ್ಥ ಮಾಡಿಕೊಳ್ಳುವ ಜತೆಗೆ, ಸ್ಪಂದನೆ ನಿಟ್ಟಿನಲ್ಲಿ ಕೈಗೊಳ್ಳಲಾಗಿರುವ ಕ್ರಮಗಳನ್ನು ಸರ್ಕಾರ ಮನದಟ್ಟು ಮಾಡಿಕೊಟ್ಟಲ್ಲಿ ಸಮಸ್ಯೆ, ತಪ್ಪುಗ್ರಹಿಕೆ ನಿವಾರಿಸಬಹುದು.

09-09-2021 Vv Pg 08

ದೀರ್ಘಾಯುಷ್ಯಕ್ಕೆ ವಾಲ್ನಟ್



ವಾಲ್ನಟ್ ಹಲವು ಆರೋಗ್ಯಕರ ಗುಣಗಳನ್ನು ಹೊಂದಿದೆ. ಸಾಕಷ್ಟು ಪ್ರಮಾಣದ ಪ್ರೊಟೀನ್, ಮಿನರಲ್ಸ್‌ಗಳನ್ನು ಒಳಗೊಂಡ ವಾಲ್ನಟ್ ಇದೀಗ ಆಯಸ್ಸನ್ನು ಹೆಚ್ಚಿಸಲು ಪೂರಕ ಎಂದಿದೆ ಇತ್ತೀಚಿನ ವರದಿ.

ಇದರಲ್ಲಿ ಇರುವ ಆರೋಗ್ಯಕರ ಗುಣಗಳು ಹೃದಯ, ಕ್ಯಾನ್ಸರ್‌ನಂಥ ಗಂಭೀರ ರೋಗಗಳಿಂದ ಪಾರು ಮಾಡುತ್ತದೆ. ಈ ಮೂಲಕ ಸುದೀರ್ಘ ಕಾಲ ಆರೋಗ್ಯವಂತರಾಗಿ ಬದುಕ ಬಹುದು ಎನ್ನಲಾಗಿದೆ. ■

09-09-2021 Uv Pg 06

09-09-2021 Vk add Pg 02